


### ಹಿಂದಿನವರ ಉಲ್ಲೇಖವೂ ಇರಲಿ

'ಹೆಣ್ಮಕ್ಕಳ ನವೆಂಬರ್ ಕ್ರಾಂತಿ' (ಡಿ. 18, ಗಿರೀಶ ದೊಡ್ಡಮನಿ) ಮುಖಪುಟ ಲೇಖನ ವಿಸ್ತೃತವಾಗಿದೆ. ಇಂದಿನವರ ಸಾಧನೆಗೆ ಪೂರಕವೆನಿಸುವ ಹಿಂದಿನ ಮಹಿಳಾ ಕ್ರೀಡಾಪಟುಗಳ ಉಲ್ಲೇಖವೂ ಅಗತ್ಯವಿತ್ತು. ಶಾಂತಾ ರಂಗಸ್ವಾಮಿ, ಎಡುಲ್ಜಿ ಸಹೋದರಿಯರು, ಉಷಾ ಸುಂದರ ರಾಜ್, ಕೆ.ಆರ್. ಸರಸ್ವತಿಯವರಂಥವರು ಅಂದಿನ ಸಮಾಜದ ಎಲ್ಲೆಗಳನ್ನು ಮೀರಿ ಬೆಳೆದವರು. ಇವರ ಸಾಧನೆಯನ್ನೂ ಮೆಲುಕು ಹಾಕಬೇಕಿತ್ತು.

—ಕೆ.ಎಸ್. ಸೋಮೇಶ್ವರ

### ಮುಂದಿನವರಿಗೆ ಮಾದರಿ

ಪ್ರಯತ್ನ ಮತ್ತು ನಿರಂತರ ಶ್ರಮದ ಮೂಲಕ ಕ್ರೀಡಾಲೋಕದಲ್ಲಿ ಹೆಣ್ಣುಮಕ್ಕಳು ಉನ್ನತ ಸಾಧನೆ ಮಾಡಲು ಸಾಧ್ಯ ಎಂಬುದನ್ನು ಹೆಣ್ಣುಮಕ್ಕಳು ತೋರಿಸಿದ್ದಾರೆ. ಸಿಕ್ಕ ಅವಕಾಶಗಳನ್ನು ಸಮರ್ಥವಾಗಿ ಉಪಯೋಗಿಸಿಕೊಂಡು ಅಡೆತಡೆಗಳನ್ನು ಮೀರಿ ಸಾಧನೆ ಮಾಡಿ ತೋರಿಸಿ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ. ಛಲ, ಶ್ರಮ ಹಾಗೂ ಶ್ರದ್ಧೆಯಿಂದ ಮುನ್ನಡೆದರೆ ಸಾಧನೆ ಸಾಧ್ಯವಿದೆ ಎಂಬುದನ್ನು ಸಾಧಿಸಿದ ಹೆಣ್ಣುಮಕ್ಕಳ ಕ್ರೀಡಾಲೋಕದ ಯಶೋಗಾಥೆಗಳು ಇನ್ನಷ್ಟು ಪ್ರಕಟಗೊಳ್ಳಲಿ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

### ಕ್ರಾಂ(ಕಾಂ)ತಿ!

'ಹೆಣ್ಮಕ್ಕಳ ನವೆಂಬರ್ ಕ್ರಾಂತಿ' ಗಮನಾರ್ಹ. ಆದರೆ ಅದು ನವೆಂಬರ್‌ಗೆ ಸೀಮಿತವೇ? ಅವರ 'ಕಾಂತಿ'ಯಂತೂ ಕಾಲದೇಶಗಳನ್ನು ಮೀರಿದ್ದು: 'ಕಾಂತಾಸಂಹಿತ'! (ಕ್ರಾಂತಿ, ಶಾಂತಿ ಎರಡೂ 'ಹೆಣ್ಮಕ್ಕ'ಳನ್ನೇ ಅವಲಂಬಿಸಿವೆ).

—ಸಿಪಿಕೆ, ಮೈಸೂರು

### ಹೆಮ್ಮೆಯ ಭಾವ

ಹೆಣ್ಣುಮಕ್ಕಳ ಸಾಧನೆ ಕಂಡು ಹೆಮ್ಮೆ ಅನಿಸಿತು. ಅವರನ್ನು ಈ ಮಟ್ಟಕ್ಕೆ ತಯಾರು ಮಾಡಿದ ತರಬೇತುದಾರರಿಗೂ ಮೆಚ್ಚುಗೆಯಿರಲಿ.

—ಅನುರಾಧ ಎಸ್.ಪಿ., ಬೆಂಗಳೂರು

### ಹರಿಯುವ ನೀರಾಯಿತು...

'ಜೀವನ ನಿಂತ ನೀರಲ್ಲ' (ಡಿ. 18, ಸಿ.ಎನ್. ಮುಕ್ತಾ) ಕಥೆ ಚೆನ್ನಾಗಿದೆ. ಪವನ್, 'ಹಬ್ಬಕ್ಕೆ ನಿನ್ನ ಗೆಳತಿ ಪ್ರತಿಮಾಳನ್ನು ಕರೆಯಕೂಡದು' ಎಂದು ಹೆಂಡತಿಗೆ ಹೇಳಿದಾಗ ಇವರಿಬ್ಬರ ನಡುವೆ ಏನೋ ಇದೆ ಎಂಬ ಅನುಮಾನ ಮೂಡಿತು. ಆದರೆ ವಿಷಯ ಬೇರೆಯೇ ಇತ್ತು. ಪವನ್ ಸಲಹೆಯಂತೆ ನಡೆದುಕೊಂಡ ಪ್ರತಿಮಾಳ ಜೀವನ ನೆಲೆ ಕಂಡಿತು. ನೀರು ಹರಿಯದೇ ಅಲ್ಲೇ ನಿಂತಿದ್ದರೆ ಪಾಚಿ ಕಟ್ಟಿ ಕೊಳೆತುಹೋಗುತ್ತಿತ್ತು. ಜೀವನ ಹರಿಯುವ ನೀರಾಯಿತು.

—ಸುಜಾತ ಆರ್., ತುಮಕೂರು



### ಗಮನಸೆಳೆದ ವ್ಯಕ್ತಿತ್ವ...

ಸಾಮಾನ್ಯವಾಗಿ ಕೌಟುಂಬಿಕ ಕಥೆಗಳಲ್ಲಿ ಗಂಡಸರನ್ನು ವಿಲನ್ ತರಹ ಚಿತ್ರಿಸುತ್ತಾರೆ, ಈ ಕಥೆಯಲ್ಲಿ ಪವನ್ ವ್ಯಕ್ತಿತ್ವವನ್ನು ಹಿರಿದಾಗಿಸಿದ್ದು ವೈಯಕ್ತಿಕವಾಗಿ ಖುಷಿಯಾಯಿತು.

—ಕೆ.ಎಂ. ಮಧ್ವರಾಯ, ಬೆಂಗಳೂರು

### ಪರಿಣಾಮಕಾರಿ ಕಥೆ

ಪವನ ತನ್ನ ಪತ್ನಿ ಬೃಂದಾ ಬಳಿ ನಿಷ್ಠುರವಾಗಿ ಪ್ರತಿಮಾಳ ಬಗ್ಗೆ ಹೇಳದಿದ್ದರೆ, ಅವಳ ಬದುಕು ಬದಲಾಗುತ್ತಿರಲಿಲ್ಲ. ಯಾವುದೋ ನೆಪದಲ್ಲಿ ಆಡಿದ ಮಾತುಗಳು ಖಂಡಿತ ತಟಸ್ಥರಾಗಿದ್ದವರ ಜೀವನ ಪರಿವರ್ತನೆಗೆ ಕಾರಣವಾಗುತ್ತದೆ ಎಂಬುದು ನಿಜ.

— ಸಿ.ಕೆ. ಗಣಪ್ಪನವರ ಮುಂಡರಗಿ, ಗದಗ

### ಹಿಂದಕ್ಕೆ ಸರಿದ ಮನಸ್ಸು

'ಸುರಿದುಣ್ಣುವ ಪರಡಿ ಪಾಯಸ' (ಡಿ. 18, ಮಾಲತಿ ಪಟ್ಟಣಶೆಟ್ಟಿ) ಲೇಖನ ಓದಿದಾಗ ಮನಸ್ಸು ಹಿಂದಕ್ಕೆ ಓಡಿತು. ಹಿಂದೆ ಯಾವುದೇ ಹಬ್ಬ ಹರಿದಿನಗಳಲ್ಲಿ ಮಾಡುವ ಸಾತಿ ಬೀಜ, ಪರಡಿ ಪಾಯಸಗಳು ನೆನಪಿಗೆ ಬಂದವು. ಈಗ ಬಂದಿರುವ ಜಾಮೂನು, ರಸಗುಲ್ಲಾ, ಪಾಯಸಗಳ ಜಾಗವನ್ನು ಆಕ್ರಮಿಸಿಕೊಂಡಿವೆ. ಈಗಿನ ಕಾಲದಲ್ಲಿ ಗವಲಿ, ಗುಳಗಿ, ಸವತಿಬೀಜ ಮತ್ತು ಪರಡಿಗಳನ್ನು ಮಾಡಲು ಕಾಲಾವಕಾಶವೇ ಇಲ್ಲವಾಗಿದೆ. ಏನೇ ಆದರೂ ಹಿಂದಿನ ದಿನಗಳು ಸಂತೋಷದ ದಿನಗಳಾಗಿದ್ದವು.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಸವಿಯಬೇಕೆನಿಸಿದೆ

ಉತ್ತರ ಕರ್ನಾಟಕ ಭಾಷೆಯ ಸೊಗಡೇ ಬಲುಚೆಂದ! ಹೆಸರೇ ಕೇಳಿಲ್ಲದ 'ಪರಡಿ ಪಾಯಸ' ಪರಿಚಯದ ಲೇಖನ ಬಹಳ ಸೊಗಸಾಗಿದೆ. 'ಸುರಿದುಣ್ಣುವ ಪರಡಿ ಪಾಯಸ' ಸವಿಯಲೇಬೇಕೆನಿಸುತ್ತಿದೆ.

—ಸೀತಾ ಕೇಶವ ಸಿಡ್ನಿ

### ಆಶಯ ಈಡೇರಲಿ

'ಇವನಾರವ ಇವನಾರವ ಎಂದೆನಿಸದಿರಿ' (ಡಿ. 18, ರಶ್ಮಿ ಎಸ್) 'ನಿಮ್ಮೊಡನೆ' ಅರ್ಥಗರ್ಭಿತವಾಗಿದೆ. ಸಾಮಾಜಿಕ ಬಹಿಷ್ಕಾರವನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುವ ಮಸೂದೆ ಕಾನೂನಾಗಿ ಜಾರಿಗೆ ಬರಬೇಕು. ಆಗ ಮಾತ್ರ 'ದಮನಿತರ ಧ್ವನಿ ಜೋರಾದಷ್ಟೂ ಶೋಷಕರ ಕೈಗಳು ಬಲಹೀನವಾಗುತ್ತವೆ' ಎಂಬ ಆಶಯ ಈಡೇರುತ್ತದೆ.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

### ಕುತೂಹಲಕಾರಿ ವ್ಯಾಟ್ಸನ್



'ವಿವಾದಾತ್ಮಕ ನೊಬೆಲ್ ವಿಜ್ಞಾನಿ ಜೇಮ್ಸ್ ವ್ಯಾಟ್ಸನ್' (ಡಿ. 18, ನೇಮಿಚಂದ್ರ) ವಿಜ್ಞಾನಿ ವ್ಯಾಟ್ಸನ್ ಬಗೆಗಿನ ಲೇಖನ ಕುತೂಹಲಕಾರಿದೆ. ಅರಿಯದ ಲೋಕದ ಬಗ್ಗೆ ಅಚ್ಚಕನ್ನಡದಲ್ಲಿ ನೇಮಿಚಂದ್ರ ಅವರು ವಿವರಿಸಿದ್ದು ವಿಸ್ಮಯಕಾರಿಯಾಗಿದೆ.

—ಶೃಂಗೇರಿ ಲೋಕೇಶ್, ಬೆಂಗಳೂರು

### ವಿಶೇಷತೆಯ ನಮ್ಮೂರು

'ಮಲೆನಾಡಿನ ನಮ್ಮೂರಂದ್ರೆ...' (ಡಿ. 11, ಎಸ್.ಪಿ. ವಿಜಯಲಕ್ಷ್ಮಿ) 'ಚೆನ್ನುಡಿ'ಯನ್ನು ಖುಷಿಯಿಂದ ಓದಿದೆ. ನರಸಿಂಹರಾಜಪುರ ಹಿಂದೆ ಎಡೆಹಳ್ಳಿ ಆಗಿತ್ತು. ಶಿವಶರಣರ ಮಠ ಇದ್ದು, ಬಂದ ಯಾತ್ರಾರ್ಥಿಗಳಿಗೆ ಎಡೆ ಇಡುತ್ತಿದ್ದುದರಿಂದ ಎಡೆಹಳ್ಳಿ ಎಂದಾಗಿತ್ತು. ನರಸಿಂಹರಾಜ ಒಡೆಯರ ಆಗಮನದಿಂದ ನರಸಿಂಹರಾಜಪುರ ಆಯಿತು. ಎಂ.ಕೆ. ಇಂದಿರಾ ಇದೇ ಭಾಗದವರಾಗಿದ್ದು, ತಮ್ಮ ಕಾದಂಬರಿಯಲ್ಲಿ ಎಡೆಹಳ್ಳಿ ಪ್ರಸ್ತಾಪಿಸಿದ್ದಾರೆ. ಭೂ ಬಾಣದ ಟಿಪ್ಪು ಸುಲ್ತಾನ್ ಇಲ್ಲಿನವರೇ. ಶ್ರೀನಿವಾಸ ಹೋಟೆಲ್ ಸ್ವಾದಕ್ಕೆ ಹೆಸರು. ಮನೆ ಕಂ ಹೋಟೆಲ್ ಆಗಿದ್ದು, ಒರಳಕಲ್ಲು ಚಟ್ನಿ ರುಚಿ ತಿಂದವನೇ ಬಲ್ಲ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in